

ಮುಗಿಲೆತ್ತರಕ್ಕೆ ನಿಂತ ಹೆಗ್ಗುಂದ ಬೆಟ್ಟದ ನಿಕಟ ದೃಶ್ಯ

ದೇವಾಲಯಕ್ಕೆ ದಾರಿ' ತೋರಿತ್ತು. ಅತ್ತ ಹೋಗಿ ನೋಡಿದಾಗ, ಅದು ದೇವಾಲಯ ಆಗಿರಲಿಲ್ಲ. ದೊಡ್ಡ ಬಂಡೆಯ ಮೇಲೆ ಹೆಣ್ಣು ದೇವತೆಯ ಪುರಾತನ ಕೆತ್ತನೆಯಾಗಿತ್ತು. ಗಮನಿಸಿದೆ, ಕೋಣನ ತಲೆಯ ಮೇಲೆ ನಿಂತ ಈ ದೇವತೆ ಮಹಿಷ ಮರ್ದಿನಿಯಾಗಿ ನಿಂತ ದುರ್ಗೆ ಆಗಿದ್ದಳು. ಮೇಲೆ ದೇವಿಯ ತಲೆಯ ಎಡ–ಬಲಕ್ಕೆ ಇಬ್ಬರು ದೇವಗಣಗಳು. ಮತ್ತೂ ಗಮನಿಸಿದಾಗ, ಈ ಕೆತ್ತನೆ ಮಹಾಬಲಿಪುರಂನ ಗುಹಾಲಯಗಳಲ್ಲಿ ಕಾಣುವ ಪಲ್ಲವರ ಕಾಲದ ನಿಂತನಿಲುವಿನ ದುರ್ಗೆಯ ಕೆತ್ತನೆಗಳಿಗೆ ಬಲು ಹೋಲುವುದು ಕಂಡು ಅಚ್ಚರಿಗೊಂಡೆ. ಮಹಾಬಲಿಪುರಂನ ಹತ್ತನೇ ಅಂಕಿಯ ಗುಹೆಯಲ್ಲಿ ದೇವಗಣಗಳ ನಡುವೆ ನಿಂತ ನಾಲ್ಕು ಕೈಗಳ ದುರ್ಗೆಯ ಕೆತ್ತನೆ ಇದೆ; ದೇವಿಯ ಬಲಗಾಲ ಬಳಿ ಕುಳಿತ ಭಕ್ತನು ತನ್ನ ಕುತ್ತಿಗೆಯನ್ನು ತಾನೇ ಕತ್ತರಿಸಿ ಅರ್ಪಿಸಲು ಹೊರಟ ಆತ್ಮಬಲಿಯ ರೌದ್ರದೃಶ್ಯವಿದೆ. ಇಲ್ಲಿ ನೋಡಿದರೆ, ಇಲ್ಲಿಯೂ ನಾಲ್ಕು ಕೈಗಳ ದುರ್ಗೆಯ ಪಾದದ ಬಳಿಯ ಭಕ್ತರ ಆತ್ಮಾಹುತಿಯ ಚಿತ್ರವಿದೆ! ಈ ದೇವಿಯ ಕೆತ್ತನೆ, ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನದ ಶಾಸನಕಾಲಕ್ಕಿಂತಲೂ ಪುರಾತನವಾದದ್ದು ಅನಿಸಿತು. ದುರ್ಗೆಗೆ ಪಲ್ಲವರ ಕಾಲದಲ್ಲಿ ತಮ್ಮ ಶಿರವನ್ನು ತಾವೇ ಕತ್ತರಿಸಿ ಅರ್ಪಿಸುವ ಭೀಕರ ಆಚರಣೆ ಇದ್ದುದನ್ನು ಪುರಾತತ್ವ ಶಾಸ್ತ್ರಜ್ಞರು ಬಹು ಹಿಂದೆಯೇ ಗುರುತಿಸಿದ್ದಾರೆ. ಐತಿಹಾಸಿಕ ಮಹತ್ವದ ಈ ಅಪೂರ್ವ ಕೆತ್ತನೆ ಇರುವ ಬಂಡೆಯ ಮೇಲೆ ಇತ್ತೀಚೆಗೆ ಮೊಳೆ ಹೊಡೆದು ತಂತಿ ಕಟ್ಟಿರುವುದನ್ನು ಕಂಡು ವಿಷಾದವಾಯಿತು.

ಒಂದು ಕಾಲಕ್ಕೆ ಗಂಗರು ಆಳಿದ ಗಂಗವಾಡಿ ಎಂದು ಕರೆಯಲಾದ ಪ್ರದೇಶದ ಒಳಗೆ ಈ ಹೆಗ್ಗುಂದ ಬೆಟ್ಟವೂ ಬೀಳುತ್ತದೆ. ಎಪಿಗ್ರಾಫಿಯಾ, ಕ್ರಿ.ಶ. ಏಳನೇ ಶತಮಾನದಲ್ಲಿ, ಗಂಗರು ಪಲ್ಲವರನ್ನು ಎದುರಿಸಿ ಸೋಲಿಸಿದ್ದನ್ನು ಉಲ್ಲೇಖಿಸುತ್ತದೆ. ಹಾಗೆಯೇ ಗಂಗರು, ಪಲ್ಲವರೊಡನೆ ಮಿಲಿಟರಿ ಹಾಗೂ ವೈವಾಹಿಕ ಸಂಬಂಧ ಬೆಳೆಸಿದ ಉದಾಹರಣೆಗಳೂ ಇವೆ. ಇಲ್ಲಿಂದ ಕೊಂಚವೇ ಇಳಿದು, ನಾನೀಗ ಪೂರ್ಣ ಬೆಟ್ಟದ ಬುಡಕ್ಕೆ ಬಂದು ತಲುಪಿದೆ. ಅಲ್ಲಿ ಕಂಡ ಓರ್ವ ಹಿರಿಯರಲ್ಲಿ ಬೆಟ್ಟದ ಶಿಖರಕ್ಕೆ ಹತ್ತುವ ದಾರಿಯನ್ನು ಕೇಳಿದೆ. ಅವರು ತೋರಿಸಿದಂತೆ, ಬೆಟ್ಟವನ್ನು ಬಳಸಿದ ಗಿಡಮರಗಳ ನಡುವಿನ ಸಣ್ಣ ಕಾಲು ಹಾದಿಯಲ್ಲಿ ಹೊರಟೆ. ಬೆಟ್ಟವನ್ನು ಪ್ರದಕ್ಷಿಣೆ ಹಾಕುತ್ತಿರುವಂತೆ, ದೂರದಿಂದ ಸಿಂಹದ ಮುಖಭಾಗದಂತೆ ಕಂಡ ಭಾಗದ ಬಳಿ ಬಂದಿದ್ದೆ. ಕತ್ತೆತ್ತಿ ನೋಡಿದಾಗ, ಅಭೇದ್ಯ ಕೋಟೆಯನ್ನು ಮುಗಿಲಿಗೆತ್ತರಿಸಿ ಪ್ರಕೃತಿ ಕಡೆದು ನಿಲ್ಲಿಸಿದಂತೆ ಕಂಡಿತು. ಅದರ ಒಂದೊಂದು ಕೊರಕಲಲ್ಲೂ ಹತ್ತಾರು ಬೃಹತ್ ಜೇನುಗೂಡುಗಳು ನೇತಾಡುತ್ತಿದ್ದವು.

ಮತ್ತಷ್ಟು ದೂರಕ್ಕೆ ನಡೆದಂತೆ, ಹೆಗ್ಗುಂದ ಹಳ್ಳಿಯ ಮುಖ್ಯ ಬೀದಿ. ಹಳ್ಳಿಯ ನಡುವಿನಿಂದ ಹಾದು ಬೆಟ್ಟದ ಆ ಬದಿಯ ಬುಡಕ್ಕೆ ದಾರಿ ಹುಡುಕಿ ಹೊರಟಂತೆ, ಹೊಸದಾಗಿ ಕಟ್ಟಿದ ಮನೆಯ ಹೊಸಿಲಲ್ಲಿ ನಾಲ್ಕು ಸುಂದರ ವೀರಗಲ್ಲುಗಳು ಮಣ್ಣಿನಲ್ಲಿ ಅರ್ಧ ಹೂತು ಹೋಗಿರುವುದು ಕಂಡಿತು. ಮೊದಲ ಮತ್ತು ನಾಲ್ಕನೆಯ ವೀರಗಲ್ಲುಗಳಲ್ಲಿ ವೀರ, ಬಿಲ್ಲು ಬಾಣವನ್ನು ಹಿಡಿದಿದ್ದಾನೆ, ಮೂರನೇ ವೀರಗಲ್ಲಿನಲ್ಲಿ ಭರ್ಜಿ ಹಿಡಿದ ವೀರ. ಆದರೆ ಎರಡನೇ ವೀರನ ಕೈಯಲ್ಲಿ ಕೋವಿಯಂತಹ ಆಯುಧ! ಇವು ಬೇರೆ ಬೇರೆ ಕಾಲಮಾನಕ್ಕೆ ಸೇರಿದ ವೀರಗಲ್ಲುಗಳಿರಬೇಕೆಂದು ಊಹಿಸಿದೆ. ಎರಡು ಮತ್ತು ಮೂರನೆಯವು, ವೀರನೊಡನೆ ಸತಿ ಹೋದ ಪತ್ನಿಯನ್ನೂ ಬಿತ್ತರಿಸಿವೆ.

ಊರಿನೊಳಗಿಂದ ಬೆಟ್ಟಕ್ಕಿದ್ದ ಸಣ್ಣ ದಾರಿ, ಪುರಾತನ ಮೆಟ್ಟಿಲುಗಳಲ್ಲಿ ಪರ್ಯವಸಾನವಾಯಿತು. ಇಲ್ಲಿ ಬೆಟ್ಟದ ತಪ್ಪಲಿನಲ್ಲಿಯೇ 'ದೇವಿ ಮಾತಾ' ಎಂದು ಸ್ಥಳೀಯರು ಕರೆಯುವ ಪುರಾತನ ಗುಡಿಯಿತ್ತು. ತಲೆ ಎತ್ತಿ ನೋಡಿದಾಗ, ಬೃಹತ್ ಮರಗಳ ಹಿಂಬದಿಯಲ್ಲಿ ಕೋಟೆಯ ಭಾಗಗಳು ಕಂಡವು. ಮೆಟ್ಟಿಲು ಹತ್ತುತ್ತಾ ಹೋದಂತೆ, ಕೋಟೆಯ ಪ್ರವೇಶದಲ್ಲಿದ್ದೆ. ಇಲ್ಲಿಂದ ಬಲಕ್ಕೆ ಹತ್ತಿ ಹೊರಟಾಗ, ಅಲ್ಲೊಂದು ಬಂಡೆಯ ಮೇಲೆ ಹನುಮಂತನ ಪುರಾತನ ಕೆತ್ತನೆ ಕಂಡಿತು. ಸ್ವಲ್ಪ ಕಡಿದಾದ ಭಾಗದಲ್ಲಿ ಬೃಹತ್ ಕೋಟೆಯ ಶಿಥಿಲ ಭಾಗಗಳಿದ್ದವು. ಸ್ವಲ್ಪ ಏರಿದಂತೆ, ಕಲ್ಲುಬಂಡೆಗಳ ನಡುವೆ ನೀರು ತುಂಬಿದ ದೊಡ್ಡ ಕಂದರ ಹಾಗೂ ಹಿಂಬದಿಗಿದ್ದ ಬೃಹತ್ ವೃಕ್ಷಗಳು ಮುಂದೆ ಹೋಗುವ ಮಾರ್ಗವನ್ನು ತಡೆದಿದ್ದವು. ಮತ್ತೆ ಒಂದಿಷ್ಟು ಕೆಳಕ್ಕೆ ಇಳಿದು ಬಂದು ಎಡಗಡೆಯ ಹಾದಿ ಹಿಡಿದು ಹತ್ತಿದೆ. ಬೆಟ್ಟದ ತುದಿಗೆ ಏರಬೇಕಾದ ಕೊನೆಯ ಭಾಗ, ಕಬ್ಬಿಣದ ಕಂಬಿಯನ್ನು ಒಂದು ಬದಿಗೆ ನಿಲ್ಲಿಸಿದ್ದರೂ, ಅಪಾಯಕಾರಿಯಾಗಿತ್ತು. ಸುಮಾರು 125 ಮೆಟ್ಟಿಲು ಹತ್ತಿ, ಬೃಹತ್ ಬಂಡೆಗಳ ನಡುವೆ ಹಾದು ಬಂದಾಗ, ಈಗ ನಾನು ಬೆಟ್ಟದ ಶಿಖರದ ಸಮತಟ್ಟು ಜಾಗದಲ್ಲಿದ್ದೆ.

ಈ ಶಿಖರದ ಎತ್ತರದಲ್ಲಿ ಪುಟ್ಟ ದೇವಾಲಯ. ಇಬ್ಬರು ದ್ವಾರಪಾಲಕರಿದ್ದ ಪ್ರವೇಶ ದ್ವಾರದಾಚೆಗೇ ಗರ್ಭಗುಡಿ. ಅಲ್ಲಿ ನಾಲ್ಕು ಕೈಗಳ ಹೆಣ್ಣು ದೇವತೆ ಸೀತಾದೇವಿ ಎಂದು ಪೌರಾಣಿಕ ನಂಬುಗೆ. ಆಕೆಯ ಪಕ್ಕದಲ್ಲಿ ನಿಂತಿರುವ ಎತ್ತರದ ಮೂರು ನಾಮ ಹೊತ್ತ ಸ್ತಂಭ, ಶ್ರೀರಾಮರ ಅಶ್ವಮೇಧ ಯಾಗದ ಕುದುರೆಯನ್ನು ಕಟ್ಟಿದ್ದ ಕಂಬವೆಂದು ಪ್ರತೀತಿ. ವಿಶೇಷ ದಿನಗಳಲ್ಲಿ ಇಲ್ಲಿ ಪೂಜೆ ನಡೆಯುತ್ತದೆ. ಉಳಿದಂತೆ ಇಲ್ಲಿ ಸದ್ದುಗದ್ದಲವಿಲ್ಲ.

ಆ ದಿನ ಶಿಖರದಲ್ಲಿ ನಾನೊಬ್ಬನೇ. ಮೇಲೆ ಅಗಲ ರೆಕ್ಕೆಗಳನ್ನು ಹರಡಿ ವೃತ್ತಾಕಾರದಲ್ಲಿ ನಿಶ್ಶಬ್ದವಾಗಿ ತೇಲುತ್ತಿದ್ದ ಹದ್ದುಗಳು, ಇದು ಯಾವ ಎರಡು ಪಾದದ ಒಬ್ಬಂಟಿ ಪ್ರಾಣಿ, ದೊಡ್ಡ ಬ್ಯಾಕ್‌ಪ್ಯಾಕ್ ಬೆನ್ನ ಮೇಲೆ ಹೇರಿಕೊಂಡು ಬಂದಿದೆ ಎಂದು ಕೌತುಕದಿಂದ ಗಮನಿಸಿದಂತೆನಿಸಿತು. ಸುತ್ತಲಿನ ನಯನ ಮನೋಹರ ದೃಶ್ಯ, ಮೆಲುವಾಗಿ ಬೀಸಿಬಂದ ಮಂದಮಾರುತ, ತಲೆಯ ಮೇಲಿನ ಸೂರ್ಯನ ಧಗೆಯಲ್ಲಿ ಹತ್ತಿಬಂದ ಆಯಾಸವನ್ನೆಲ್ಲ ಕಳೆದಿತ್ತು.

ಆತುರವಿಲ್ಲದೆ ಕೆಳಗಿಳಿದು ಬಂದು, ಹಳ್ಳಿಯಿಂದಾಚೆಗೆ ನಡೆಯುತ್ತಾ ಹೊರಟೆ. ಸ್ಕೂಟರ್ ಮೇಲಿನ ಯುವಕನೊಬ್ಬ ವಾಹನ ನಿಲ್ಲಿಸಿ 'ಬನ್ನಿ ಸರ್' ಎಂದು ಗಾಳಿಯ ವೇಗದಲ್ಲಿ ಹೆಗ್ಗುಂದ ಕ್ರಾಸ್‌ನ ಹೆದ್ದಾರಿಗೆ ತಂದು ಬಿಟ್ಟುದಲ್ಲದೆ, ಬೆಂಗಳೂರಿನ ಬಸ್ಸು ಬರುವವರೆಗೂ ನನ್ನೊಡನೆ ಕಾದು, ಬಸ್ಸು ಹೊರಟಂತೆ, ಕೈ ಬೀಸಿದ. ದಿನದ ಸುಂದರ ನೆನಪುಗಳ ಗಂಟು ಕಟ್ಟಿ, ಬೆಂಗಳೂರಿನತ್ತ ಹೊರಟೆ.

ಇಂಗ್ಲಿಷ್‌ನಿಂದ ಕನ್ನಡಕ್ಕೆ: ನೇಮಿಚಂದ್ರ

ಪ್ರತಿಕ್ರಿಯಿಸಿ: **feedback@sudha.co.in**